


**'ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ'** – ಜ್ಞಾನಕ್ಕಿಂತ ಪವಿತ್ರವಾದುದು ಯಾವುದೂ ಇಲ್ಲ ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳುತ್ತಾನೆ. ಆದ್ದರಿಂದ ವಿದ್ಯಾರ್ಥಿಗಳಾದ ನಾವು ಬಹಳ ನಿಷ್ಠೆಯಿಂದ ಜ್ಞಾನವನ್ನು ಗಳಿಸಿಕೊಳ್ಳಲು ಎಲ್ಲ ರೀತಿಯ ಪ್ರಯತ್ನವನ್ನೂ ಮಾಡಬೇಕು. ಒಂದು ಸಂಸ್ಕೃತ ಸುಭಾಷಿತ ಹೀಗೆ ಹೇಳುತ್ತದೆ:

**ವಿದ್ಯಾ ನಾಮ ನರಸ್ಯ ರೂಪಮಧಿಕಂ ಪ್ರಚ್ಛನ್ನಗುಪ್ತಂ ಧನಂ**
**ವಿದ್ಯಾ ಭೋಗಕರೀ ಯಶಸ್ಸುಖಕರೀ ವಿದ್ಯಾ ಗುರೂಣಾಂ ಗುರುಃ ।**
**ವಿದ್ಯಾ ಬಂಧುಜನೋ ವಿದೇಶಗಮನೇ**
**ವಿದ್ಯಾ ಪರಾ ದೇವತಾ**
**ವಿದ್ಯಾ ರಾಜಸು ಪೂಜಿತಾ ನ ತು ಧನಂ ವಿದ್ಯಾವಿಹೀನಃ ಪಶುಃ ॥**

"ವಿದ್ಯೆಯೆಂಬುದು ಮನುಷ್ಯನ ವಿಶೇಷವಾದ ರೂಪ; ಅದು ಅವನು ಬಚ್ಚಿಟ್ಟುಕೊಂಡ ಹಣಕ್ಕೆ ಸಮನಾದುದು. ವಿದ್ಯೆಯು ಮನುಷ್ಯನಿಗೆ ಸುಖಸಂತೋಷಗಳನ್ನೂ ಕೊಡುತ್ತದೆ, ಕೀರ್ತಿಯನ್ನೂ ಉಂಟುಮಾಡುತ್ತದೆ. ವಿದ್ಯೆಯು ಗುರುಗಳಿಗೆ ಗುರುವಾದುದು. ಪರದೇಶಕ್ಕೆ ಹೊರಟಾಗ ಅದೇ ಅವನ ಬಂಧುವೂ ಕೂಡ. ವಿದ್ಯೆಯೇ ಪರದೈವವೂ ಹೌದು. ರಾಜರು ಪೂಜಿಸುವುದು ವಿದ್ಯೆಯನ್ನೇ, ಹಣವನ್ನಲ್ಲ. ಆದ್ದರಿಂದ ವಿದ್ಯೆಯಿಲ್ಲದವನು ಪಶುವಿಗೆ ಸಮಾನ."

ಒಬ್ಬ ರಾಜ ಅಥವಾ ರಾಜಕಾರಣಿಯು ತಾನು ಆಳುವ ಪ್ರದೇಶದಲ್ಲಿ ಮಾತ್ರ ಗೌರವಕ್ಕೆ ಅರ್ಹನಾಗುತ್ತಾನೆ. ಆದರೆ **ವಿದ್ವಾನ್ ಸರ್ವತ್ರ ಪೂಜ್ಯತೇ** – ವಿದ್ಯಾವಂತನು ಎಲ್ಲ ದೇಶಗಳಲ್ಲಿಯೂ ಪೂಜಿತನಾಗುತ್ತಾನೆ.

ಇಂಥ ಅತ್ಯಂತ ಶ್ರೇಷ್ಠವಾದ ವಿದ್ಯೆಯನ್ನು ಗಳಿಸಿಕೊಳ್ಳದಿದ್ದರೆ ಏನಾಗುತ್ತದೆ ಎನ್ನುವುದನ್ನು ಒಂದು ಪ್ರಾಚೀನ ಕಥೆಯ ಮೂಲಕ ತಿಳಿಯಬಹುದು: ಕೌಶಾಂಬಿ ಎನ್ನುವುದು ಒಂದು ರಾಜ್ಯ. ಅಲ್ಲಿನ ಪುರೋಹಿತನ ಮಗನ ಹೆಸರು ಕಪಿಲ ಎಂದು. ತಂದೆ ಮಹಾಪಂಡಿತರು. ಆದರೆ ಮಗ ಆಸಕ್ತಿವಹಿಸಿ ವಿದ್ಯೆ ಕಲಿಯಲಿಲ್ಲ, ಶ್ರಮವಹಿಸಿ ಅಭ್ಯಾಸ ಮಾಡಲಿಲ್ಲ. ಒಂದು ದಿನ ಇದ್ದಕ್ಕಿದ್ದಂತೆ ಕಪಿಲನ ತಂದೆ ತೀರಿಕೊಂಡರು. ಕಪಿಲನ ತಾಯಿ ಅವನಿಗೆ ಹೇಳಿದರು, "ಮಗೂ, ನೀನು ವಿದ್ಯಾಭ್ಯಾಸ ಮಾಡಿದ್ದರೆ, ರಾಜನಿಗೆ ಕುಲಪುರೋಹಿತನಾಗಿ, ನಿನ್ನ ತಂದೆಯ ಕಾರ್ಯವನ್ನು ವಹಿಸಿಕೊಳ್ಳಬಹುದಾಗಿತ್ತು. ಈಗ ಹೊಟ್ಟೆಪಾಡಿಗೆ ಗತಿ ಏನು? ನಾವು ಹೇಗೆ ತಾನೇ ಜೀವನ ನಡೆಸುವುದು?" ಹೀಗೆ ಗೋಳಾಡುತ್ತಿದ್ದ ತಾಯಿಯನ್ನು ನೋಡಿ ಕಪಿಲನಿಗೆ ದುಃಖವಾಯಿತು. ಅವನು ವಿದ್ಯೆಯನ್ನು ಕಲಿಯಲೇಬೇಕೆಂದು ಮನಸ್ಸು ಮಾಡಿ ಶ್ರಾವಸ್ತಿ ಎಂಬ ಊರಿಗೆ ಬಂದ.

ಅಲ್ಲಿನ ರಾಜ ಒಂದು ವಿಚಿತ್ರವಾದ ಘೋಷಣೆ ಮಾಡಿದ. ಬೆಳಗ್ಗೆ ಯಾರನ್ನು ತಾನು ಮೊದಲು ನೋಡುತ್ತೇನೆಯೋ, ಅವನಿಗೆ ಇಂತಿಷ್ಟು ಬಂಗಾರ ಕೊಡುವುದಾಗಿ ಪ್ರಕಟಿಸಿದ. ಕಪಿಲನಿಗೆ ಆ ಬಂಗಾರವನ್ನು ಪಡೆದುಕೊಳ್ಳಬೇಕೆಂದು ಆಸೆಯಾಯಿತು. ಬೆಳಗ್ಗೆ ತನ್ನನ್ನೇ ರಾಜನು ನೋಡಬೇಕೆಂದು ಅವನು ಬಯಸಿದ. ಅವನಿಗೆ ರಾತ್ರಿ ನಿದ್ದೆ ಬರಲಿಲ್ಲ. ತನಗಿಂತ ಮೊದಲು ಬೇರೆ ಯಾರಾದರೂ ಹೋಗಿ ರಾಜನನ್ನು ನೋಡಿಬಿಟ್ಟರೆ ಎಂಬ ಚಿಂತೆಯಿಂದ ಹೊರಳಾಡುತ್ತಿದ್ದ. ಕ್ಷಣಕ್ಷಣಕ್ಕೆ ಯಾವಾಗ ಬೆಳಗಾದೀತು ಎಂದು ತವಕಪಡುತ್ತಿದ್ದ. ಅರ್ಧರಾತ್ರಿ ಕಳೆದಿರುವಾಗಲೇ ಬೆಳಗಾಗಿಹೋಗಿದೆಯೆಂಬ ಭ್ರಮೆಯಿಂದ ಅರಮನೆಯ ಕಡೆಗೆ ಓಡೋಡಿ ಬಂದ. ರಾಜಭಟರು ಕಳ್ಳನಿರಬೇಕೆಂದು ಅವನನ್ನು ಬಂಧಿಸಿ, ಬೆಳಗ್ಗೆ ರಾಜಸಭೆಯಲ್ಲಿ ಹಾಜರುಪಡಿಸಿದರು.

ಕಪಿಲನು ನಡೆದದ್ದನ್ನು ಹಾಗೆಯೇ ಹೇಳಿದ. ರಾಜನಿಗೆ ಅವನ ಮೇಲೆ ಕರುಣೆ ಬಂದಿತು. ತಾನು ಘೋಷಿಸಿದ್ದಂತೆ, ಆ ಚಿನ್ನವನ್ನು ಕೊಡಲು ಮುಂದಾದ. ಆಗ ಕಪಿಲನಿಗೆ ಅನ್ನಿಸಿತು, "ನಾನು ಈ ಚಿನ್ನಕ್ಕಾಗಿ ಕ್ಷಣಕ್ಷಣವೂ ಕಾತರನಾಗಿದ್ದೆ. ಮನಸ್ಸು ಚಿನ್ನವನ್ನು ಪಡೆದುಕೊಳ್ಳಲೇಬೇಕೆಂದು ತುಡಿಯುತ್ತಿತ್ತು. ಇದೇ ಕಾತರವನ್ನು ಮತ್ತು ಮಾನಸಿಕ ತುಡಿತವನ್ನು ವಿದ್ಯೆಯನ್ನು ಗಳಿಸಲು ನಾನು ಉಪಯೋಗಿಸಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು? ಅದರಿಂದ ಸ್ವಲ್ಪ ಕಾಲದಲ್ಲಿಯೇ ದೊಡ್ಡ ವಿದ್ವಾಂಸನಾಗಬಹುದಾಗಿತ್ತಲ್ಲವೇ?" "ಇನ್ನು ಮುಂದೆ ನಾನು ಇದೇ ರೀತಿಯ ಹಂಬಲ ಮತ್ತು ಕಾತರತೆಗಳಿಂದ ವಿದ್ಯೆ ಕಲಿಯಲು ಪ್ರಯತ್ನಿಸುತ್ತೇನೆ" ಎಂದು ಅವನು ನಿಶ್ಚಯಿಸಿದನು. ದೊಡ್ಡ ವಿದ್ವಾಂಸನಾದರೆ, ಒಬ್ಬ ರಾಜನಿಂದ ಮಾತ್ರವಲ್ಲ, ಜಗತ್ತಿನ ಎಲ್ಲ ರಾಜರಿಂದಲೂ ಸನ್ಮಾನ, ಗೌರವಗಳು ದೊರಕುವುದು ಎಂದೂ ಅವನು ಆಲೋಚಿಸಿದನು. ಈ ದೃಢನಿರ್ಧಾರ ಮಾಡಿ, ರಾಜನಿಗೆ ನಮಸ್ಕರಿಸಿ, ವಿದ್ಯೆಯನ್ನು ಕಲಿಯಲು ಗುರುಕುಲಕ್ಕೆ ನಡೆದನು.

### ಏಕಾಗ್ರತೆಗೆ ಉಪಾಯ– ವೈರಾಗ್ಯ

ವೈರಾಗ್ಯ ಎಂದರೇನು? ಯಾವುದೇ ಕೆಲಸ ಮಾಡುತ್ತಿರುವಾಗ ಮನಸ್ಸು ಕದಲದಂತೆ ನೋಡಿಕೊಳ್ಳುವುದೇ ವೈರಾಗ್ಯ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ನಾವು ಓದುವಾಗ, ಟಿ.ವಿ., ರೇಡಿಯೋ ಇವುಗಳನ್ನು ಹಾಕಿಕೊಂಡಿದ್ದರೆ, ಅವು ನಮ್ಮ ಮನಸ್ಸನ್ನು ಕದಲಿಸುತ್ತವೆ. ಓದುವ ಸಮಯದಲ್ಲಿ ಬೇರೆಯವರೊಡನೆ ಮಾತನಾಡುತ್ತಿದ್ದರೆ ಆಗಲೂ ಮನಸ್ಸು ಕದಲುತ್ತದೆ. ಅದಕ್ಕೆ ಅವಕಾಶ ಮಾಡಿಕೊಡಬಾರದು. ಅವುಗಳ ಆಕರ್ಷಣೆಯನ್ನು ಮೆಟ್ಟಿನಿಲ್ಲಬೇಕು. ಆಗ ಮಾತ್ರ ಏಕಾಗ್ರತೆ ಸಾಧ್ಯ. ಸ್ವಾಮೀಜಿ ಹೇಳುತ್ತಾರೆ: "ಮನಸ್ಸು ಹೊರಗಿನ ವಸ್ತುಗಳ ವಶವಾಗದಂತೆ ನೋಡಿಕೊಳ್ಳುವುದೇ ವೈರಾಗ್ಯ. ಮನಸ್ಸು ನಮ್ಮ ಸ್ವಾಧೀನಕ್ಕೆ ಒಳಪಟ್ಟಿರಬೇಕು. ನಾವೆಂದೂ ಮನಸ್ಸಿನ ಅಧೀನಕ್ಕೆ ಒಳಪಟ್ಟಿರಬಾರದು. ಇಂಥ ಮಾನಸಿಕ ಶಕ್ತಿಗೇ ವೈರಾಗ್ಯವೆಂದು ಹೆಸರು." ⌘

# ಬುದ್ಧ ಮರಳಿ ತಾಯ್ನಾಡಿಗೆ

—ಸ್ವಾಮಿ ರಾಘವೇಶಾನಂದ

***(ಬುದ್ಧನು ಗ್ರಾಮದ ಮಕ್ಕಳಿಗೆ ಒಂದು ಕಥೆಯನ್ನು ಹೇಳಿದನು. ಅದು ತನ್ನದೇ ಪೂರ್ವಜನ್ಮದ ಕಥೆ. ಅದರಲ್ಲಿ ಮೇಘ ಎನ್ನುವವನು ಒಬ್ಬ ಯುವತಿಯನ್ನು ಮದುವೆಯಾಗುತ್ತಾನೆ. ಇದನ್ನು ಯಶೋಧರೆ ಕೂಡ ಕೇಳಿಸಿಕೊಳ್ಳುತ್ತಿದ್ದಳು.)***

ಏಕಾಗ್ರತೆಯಿಂದ ಬುದ್ಧನ ಮಾತನ್ನು ಆಲಿಸುತ್ತಿದ್ದ ಯಶೋಧರೆಯು ಕೈಜೋಡಿಸಿ ಆತನಿಗೆ ನಮಸ್ಕಾರ ಮಾಡಿದಳು. ಆಕೆಯ ಕಣ್ಣುಗಳಲ್ಲಿ ಆನಂದಬಾಷ್ಪ ಸುರಿಯುತ್ತಿತ್ತು. ಆ ಕಥೆಯು ತನಗೇ ಸಂಬಂಧಿಸಿದ್ದೆಂದು ಆಕೆಗೆ ತಿಳಿದುಹೋಯಿತು. ಬುದ್ಧ ಈ ರೀತಿಯಲ್ಲಿ ತನಗೆ ಧನ್ಯವಾದಗಳನ್ನು ಅರ್ಪಿಸಿದ್ದಾನೆ ಎಂದು ಅವಳು ತಿಳಿದುಕೊಂಡಳು. ರಾಣಿ ಗೌತಮಿಯೂ ಈ ಕಥೆಯನ್ನೇ ಬುದ್ಧ ಏಕೆ ಆರಿಸಿಕೊಂಡ ಎಂದು ಅರಿತಳು. ಆಕೆ ಯಶೋಧರೆಯ ಭುಜದ ಮೇಲೆ ಪ್ರೀತಿಯಿಂದ ಕೈಯಿರಿಸಿದಳು. ಅನಂತರ ಮಕ್ಕಳನ್ನು ಉದ್ದೇಶಿಸಿ ಹೀಗೆ ಹೇಳಿದಳು:

"ಮಕ್ಕಳೇ, ಈ ಜನ್ಮದಲ್ಲಿ ಕೂಡ ಮೇಘ ಜನಿಸಿದ್ದಾನೆ. ಅವನು ಯಾರು ಗೊತ್ತೆ? ಅವನೇ ನಿಮಗೆ ಕಥೆ ಹೇಳುತ್ತಿರುವ ಬುದ್ಧ. ಮೇಘನ ಸುಂದರ ಪತ್ನಿ ಯಾರೂ ಅಲ್ಲ, ನಿಮ್ಮವಳೇ ಆದ, ನಿಮ್ಮನ್ನು ಸದಾ ಪ್ರೀತಿಸುತ್ತಿರುವ ಯಶೋಧರೆ. ರಾಜಕುಮಾರ ಸಿದ್ಧಾರ್ಥ ಧರ್ಮದ ಮಾರ್ಗದಲ್ಲಿ ನಡೆದು, ಜ್ಞಾನವನ್ನು ಗಳಿಸಿ, ಬುದ್ಧನಾಗಲು ಸಹಾಯಮಾಡಿದ್ದು ಯಶೋಧರೆಯೇ. ಏಕೆಂದರೆ ಆಕೆ ಅವನನ್ನು ಸರಿಯಾಗಿ ಅರ್ಥಮಾಡಿಕೊಂಡು, ಆ ಮಾರ್ಗದಲ್ಲಿ ಆತನಿಗೆ ಸಹಕರಿಸಿದಳು. ನಾವೆಲ್ಲ ಅವಳಿಗೆ ಧನ್ಯವಾದಗಳನ್ನು ಅರ್ಪಿಸಬೇಕು."



ಮಕ್ಕಳು ಯಶೋಧರೆಯನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಅವರೆಲ್ಲ ಅವಳೆಡೆಗೆ ತಿರುಗಿ ಬಾಗಿಬಾಗಿ ವಂದಿಸಿ, ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಿದರು. ಇದು ಬುದ್ಧನ ಹೃದಯವನ್ನು ತಟ್ಟಿತು; ಆನಂದಗೊಳಿಸಿತು. ಬುದ್ಧ ತನ್ನ ಅನುಯಾಯಿಗಳೊಂದಿಗೆ ನಿಧಾನವಾಗಿ ತನ್ನ ವಿಹಾರದತ್ತ ಹೆಜ್ಜೆಹಾಕಿದನು.

ಮತ್ತೆ ಕೆಲವು ವಾರದವರೆಗೆ ಬುದ್ಧನು ಆಗಾಗ್ಗೆ ಅರಮನೆಗೆ ಭೇಟಿಕೊಟ್ಟು ಧರ್ಮಪ್ರಚಾರ ಮಾಡುತ್ತಿದ್ದನು. ರಾಜನಿಗೆ ತನ್ನ ಮಗ ನಂದನ ಬಗ್ಗೆ ಬಹಳ ಚಿಂತೆಯಿದ್ದಿತು. ಒಂದು ದಿನ ಇದರ ಬಗ್ಗೆ ಬುದ್ಧನಿಗೆ ಹೀಗೆ ಹೇಳಿದ: "ನಂದ ಒಳ್ಳೆಯವನು. ಕಾಲಕ್ರಮದಲ್ಲಿ ಅವನು ರಾಜ್ಯದ ಭಾರವನ್ನು ವಹಿಸಬೇಕಾಗುತ್ತದೆ. ಆದರೆ ಅದಕ್ಕೆ ಬೇಕಾದ ದೃಢತೆ ಮತ್ತು ಚಾರಿತ್ರ್ಯ ಅವನಿಗೆ ಇಲ್ಲ." ಅದಕ್ಕೆ ಬುದ್ಧ ಹೀಗೆ ಹೇಳಿದ: "ಅವನು ಒಂದು ವಾರ ನನ್ನೊಡನೆ ವಿಹಾರದಲ್ಲಿರಲಿ. ತನ್ನ ಬಾಳಿನಲ್ಲಿ ಸ್ಪಷ್ಟತೆ ಮತ್ತು ಧ್ಯೇಯವನ್ನು ಬೆಳೆಸಿಕೊಳ್ಳಲು ನೆರವಾಗುವ ತರಬೇತಿಯನ್ನು ನಾನು ನೀಡುತ್ತೇನೆ." ಮಹಾರಾಜನು ಇದಕ್ಕೆ ಸಂತೋಷದಿಂದ ಒಪ್ಪಿಕೊಂಡನು.

ಒಮ್ಮೆ ಬುದ್ಧನು ಅರಮನೆಗೆ ಬಂದಿದ್ದನು. ಹಿಂದಿರುಗುವಾಗ ಬೇಕೆಂದೇ ತನ್ನ ಭಿಕ್ಷಾಪಾತ್ರೆಯನ್ನು ಬಿಟ್ಟುಬಂದನು. ನಂದನು ಆ ಭಿಕ್ಷಾಪಾತ್ರೆಯನ್ನು ತೆಗೆದುಕೊಂಡು ಬುದ್ಧನನ್ನು ಹಿಂಬಾಲಿಸಿದನು. ವಿಹಾರವನ್ನು ತಲುಪಿದ ಮೇಲೆ ಬುದ್ಧನು ನಂದನನ್ನು ಒಂದು ವಾರ ಉಳಿದುಕೊಳ್ಳಲು ಹೇಳಿದನು. ಬೌದ್ಧಭಿಕ್ಷುಗಳ ಜೀವನವನ್ನು ಆಳವಾಗಿ ಅಧ್ಯಯನ ಮಾಡಲು ತಿಳಿಸಿದನು. ನಂದನು ತನ್ನ ಅಣ್ಣನನ್ನು ಆಳವಾಗಿ ಪ್ರೀತಿಸುತ್ತಿದ್ದನು, ಗೌರವಿಸುತ್ತಿದ್ದನು. ಹೀಗಾಗಿ ಆತನ ಆದೇಶವನ್ನು ಪಾಲಿಸಿದನು. ತನ್ನ ಸುತ್ತಲೂ ನೆಲೆಸಿದ್ದ ಭಿಕ್ಷುಗಳ ಶಾಂತ ಸರಳ ಜೀವನದಿಂದ ನಂದನು ಪ್ರಭಾವಿತನಾದನು. ಒಂದು ವಾರದ ಕೊನೆಯಲ್ಲಿ ಬುದ್ಧನು ನಂದನನ್ನು, "ದೀಕ್ಷೆ ಪಡೆದು ಒಂದೆರಡು ತಿಂಗಳುಗಳ ಕಾಲ ಭಿಕ್ಷುವಿನ ಜೀವನ ನಡೆಸುತ್ತೀಯಾ?" ಎಂದು ಕೇಳಿದನು. ಅದಕ್ಕೆ ನಂದನು ಸಂತಸದಿಂದ ಒಪ್ಪಿಕೊಂಡನು. ಅನಂತರ ಬುದ್ಧನು ಸಾರಿಪುತ್ತನಿಗೆ, ನಂದನಿಗೆ ಭಿಕ್ಷುಧರ್ಮದ ಪ್ರಾಥಮಿಕ ನಿಯಮಗಳನ್ನು ತಿಳಿಸಿ, ಭಿಕ್ಷುವಿನ ದೀಕ್ಷೆಯನ್ನು ಕೊಡುವಂತೆ ಹೇಳಿದನು.

ನಂದನು ಬುದ್ಧನ ಆಕರ್ಷಣೆಯಿಂದ ಇದಕ್ಕೆಲ್ಲಾ ಒಪ್ಪಿಕೊಂಡನು. ಆದರೆ ಅವನ ಮನಸ್ಸು ಭೋಗಜೀವನದ ಬಗೆಗಿನ ಆಸೆಯನ್ನು ಇನ್ನೂ ಗೆದ್ದುಕೊಂಡಿರಲಿಲ್ಲ. ಒಂದು ತಿಂಗಳು ಕಳೆಯುವಷ್ಟರಲ್ಲಿಯೇ ನಂದನು ತನ್ನ ಪತ್ನಿಯಾಗಲಿರುವ ಯುವತಿ ಕಲ್ಯಾಣಿಗಾಗಿ ಪರಿತಪಿಸತೊಡಗಿದನು. ಭಿಕ್ಷೆಗೆ ಹೋದಾಗಲೆಲ್ಲ ಎಲ್ಲಾದರೂ ಕಲ್ಯಾಣಿ ನಿಂತಿರುವಳೇ ಎಂದು ಅವಳನ್ನೇ ಅವನ ಕಣ್ಣುಗಳು ಹುಡುಕುತ್ತಿದ್ದವು. ನಂದ ತನ್ನ ಭಾವನೆಗಳನ್ನು ಎಷ್ಟು ಮರೆಮಾಚಲೆತ್ನಿಸಿದರೂ, ಬುದ್ಧನಿಗೆ ಅವನ ಮನದಾಳದಲ್ಲಿ ಏನಿದೆ ಎನ್ನುವುದು ಸ್ಪಷ್ಟವಾಗಿ ಕಾಣುತ್ತಿತ್ತು. ಒಂದು ದಿನ ನಂದನಿಗೆ ಅವನು ಹೀಗೆ ಹೇಳಿದನು: "ನೀನು ಭಿಕ್ಷುಜೀವನದಲ್ಲಿಯಾಗಲಿ, ಅರಮನೆಯ ಜೀವನದಲ್ಲಿಯಾಗಲಿ, ನಿನ್ನ ಗುರಿಯನ್ನು ತಲುಪಬೇಕಾದರೆ ಕ್ಷುಲ್ಲಕ ಭಾವನೆಗಳನ್ನು ಮೀರಿರಬೇಕು. ನಾವೀಗ ನೀಡುತ್ತಿರುವ ತರಬೇತಿಯಲ್ಲಿ ನಿನ್ನ ಮನಸ್ಸನ್ನು ಸಂಪೂರ್ಣ ತೊಡಗಿಸಿಕೊಂಡು, ಶಿಸ್ತಿನಲ್ಲಿಡು. ಆಗ ಮಾತ್ರ ನೀನು ಬೇರೆಯವರ ಸೇವೆಮಾಡುವ ಸಾಮರ್ಥ್ಯವುಳ್ಳ ಸಮರ್ಥ ನಾಯಕನಾಗುವೆ." ತನ್ನ ಮನದಾಳದ ಭಾವನೆಗಳೆಲ್ಲ ಬುದ್ಧನಿಗೆ ಹೇಗೆ ಅರ್ಥವಾಗುತ್ತಿದೆ ಎಂದು ನಂದನು ಬಹಳ ಆಶ್ಚರ್ಯಪಟ್ಟನು.

ತರುಣನಾದ ತನ್ನ ಚಿಕ್ಕಪ್ಪನು ಬುದ್ಧನ ವಿಹಾರದಲ್ಲಿ ವಾಸಿಸುತ್ತಿದ್ದುದು ರಾಹುಲನಿಗೆ ತುಂಬ ಅಸೂಯೆಯಾಗಿತ್ತು. ತಾನೂ ಅಲ್ಲಿಗೆ ಹೋಗಿ ಇರಬೇಕೆಂದು ಅವನಿಗೆ ಆಸೆಯಾಯಿತು. ತನ್ನ ತಾಯಿಯ ಬಳಿಗೆ ಹೋಗಿ ಈ ಆಶಯವನ್ನು ಅವನು ವ್ಯಕ್ತಪಡಿಸಿದನು. ಅದಕ್ಕೆ, ಯಶೋಧರೆಯು ರಾಹುಲನ ತಲೆ ಸವರುತ್ತ ಹೀಗೆ ಹೇಳಿದಳು: "ಮಗೂ, ಮೊದಲು ಬೆಳೆದು ದೊಡ್ಡವನಾಗು. ಆಮೇಲೆ ಬೇಕಾದರೆ ಭಿಕ್ಷುವಿನ ಜೀವನವನ್ನು ನಡೆಸುವೆಯಂತೆ." ರಾಹುಲನು ಮುಗ್ಧಭಾವದಿಂದ, "ನಾನು ಹೇಗೆ ತಾನೇ ಬೆಳೆದು